ವರ್ತಿಸುತ್ತಿದ್ದರು. ಅವರ ಮನೆಯ ದುಃಖ ರೋದನಗಳು ವರ್ಣಿಸಲಸದಳವಾಗಿದ್ದವು. ಆಯಸ್ಸು ಮಾರಿ ಬಂದ ಹಣದಲ್ಲಿ ಖುಷಿಯಲ್ಲಿದ್ದವರು ಯಾರೂ ಇರಲಿಲ್ಲ. ಕೆಲವು ಪುಂಡು ಪೋಕರಿಗಳು, ರೌಡಿಗಳು, ಐಸಿಯುಗಳಲ್ಲಿದ್ದ ರೋಗಿಗಳು, ಹುಚ್ಚರು, ಭಿಕ್ಷುಕರು, ವೃದ್ಧಾಶ್ರಮದಲ್ಲಿದ್ದವರನ್ನು ಹಿಡಿದು ಪ್ರವಾದಿ ಕೇಂದ್ರಕ್ಕೆ ತಂದಿದ್ದರು. ಆದರೆ ಶ್ರೀಮಂತರು ತಕರಾರು ಮಾಡಿಯಾರೆಂಬ ಭಯಕ್ಕೆ ಅವರನ್ನು ಪ್ರವಾದಿ ಕೇಂದ್ರದಿಂದ ಹಿಂದಕ್ಕಟ್ಟಲಾಯಿತು. ಆಯಸ್ಸು ದಾನ ಮಾಡಿ ಮನೆಗೆ ಹಿಂತಿರುಗುತ್ತಿದ್ದವನೊಬ್ಬ ಬಸ್ಸು ಹತ್ತುತ್ತ ಕುಸಿದು ಪ್ರಾಣ ಬಿಟ್ಟದ್ದು ಪರಿಸ್ಥಿತಿಯ ಭೀಕರತೆಯನ್ನು ಮತ್ತಷ್ಟು ಹೆಚ್ಚಿಸಿತ್ತು.

ನಗರದಲ್ಲೆಲ್ಲ ಇದೇ ದಂಧೆ ಬಿಡುವಿಲ್ಲದೆ ನಡೆದು ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆದು ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿ ಹಣ ತೆರಿಗೆ ರೂಪದಲ್ಲಿ ಬಂದು ಸೇರಿತು. ಪ್ರವಾದಿಯವರಿಂದ ನಾವು ಪ್ರಗತಿಪಥದಲ್ಲಿದ್ದೇವೆಂದು ಮಂತ್ರಿ ಮಹೋದಯರು ಶಹಬ್ಬಾಸ್‌ಗಿರಿ ಕೊಟ್ಟರು. ಪ್ರವಾದಿಯು ಪ್ರಮುಖ ರಾಜಕಾರಣಿಗಳಿಗೆ ಅವರ ಹುದ್ದೆ ಮತ್ತು ಪ್ರಭಾವಕ್ಕನುಸಾರವಾಗಿ ಆಯಸ್ಸಿನ ವರ್ಗಾವಣೆ ಮಾಡಿಕೊಟ್ಟನು. ಅವರೆಲ್ಲ ತಮ್ಮನ್ನು ಸೃಷ್ಟಿಸಿ, ಆಯಸ್ಸು ಕೊಟ್ಟು ಮರೆತಂತಿದ್ದ ಮೂಲ ದೇವರು, ಮನೆ ದೇವರು, ನಗರ ದೇವತೆ ಮುಂತಾದ ದೈವಗಳನ್ನು ಮರೆತು ಪ್ರವಾದಿಯನ್ನು ಮಾತ್ರ ಆರಾಧಿಸತೊಡಗಿದರು.

ಅನೇಕ ಚಲನಚಿತ್ರ ನಟನಟಿಯರು ಪ್ರವಾದಿ ಕೇಂದ್ರಕ್ಕೆ ಭೇಟಿ ಕೊಟ್ಟು ಮೂವತ್ತು ನಲವತ್ತು ಐವತ್ತು ವರ್ಷ ಆಯಸ್ಸು ಹೆಚ್ಚಿಸಿಕೊಂಡು ಸಂಭ್ರಮಿಸತೊಡಗಿದರು. ನಟಿಯರಂತೂ ತಮಗೆ ಆಯಸ್ಸು ಮಾತ್ರವಲ್ಲ ವಯಸ್ಸಿನ ಯಾವ ಅವಲಕ್ಷಣವೂ ತಮ್ಮ ದೇಹದಲ್ಲಿ ಕಾಣದಂತೆ ಹರೆಯದ ಸಿಹಿ ಸೌಂದರ್ಯ, ಚರ್ಮದ ಹೊಳಪು, ಎದೆ ಸೊಂಟ ನಿತಂಬಗಳ ಅಳತೆ ಸ್ವಲ್ಪವೂ ಏರುಪೇರಾಗದಂತೆ ಮಾಡಲು ಪ್ರವಾದಿಯ ಚರಣಕಮಲಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡು ಬಿಟ್ಟರು. ಇದುವರೆಗೆ ಆರೋಗ್ಯ ಮತ್ತು ಜೀರೋ ಫಿಗರ್ ಕಾಪಾಡಿಕೊಂಡು ನಿಯಂತ್ರಿತ ಬದುಕನ್ನು ಸಾಗಿಸುತ್ತಿದ್ದ ನಟಿಯರು ಪ್ರವಾದಿಯ ಕಾರ್ಯಾಚರಣೆಯನ್ನು ನೆವ ಮಾಡಿಕೊಂಡು ಯದ್ವಾತದ್ವಾ ತಿಂದು ತೇಗಿ ಬಲೂನು ಗಳಂತಾದರು. ನಾಯಕನಟರ ಸಿಕ್ಸ್ ಪ್ಯಾಕ್ ಹೋಗಿ ಬೊಜ್ಜು ಬೆಳೆಯಿತು.

ಅನೇಕ ಸಲ ಪ್ರವಾದಿ ಕೇಂದ್ರದವರೇ ನೂರಾರು ದಾನಿಗಳನ್ನು ಒದಗಿಸಿ ದಾನಿಗಳಿಗೆ ಸಲ್ಲತಕ್ಕ ಹಣವನ್ನು ತಾವೇ ಕಬಳಿಸುತ್ತಿದ್ದರು. ದಾನಿಯನ್ನು ಪೂರೈಕೆ ಮಾಡಿದ್ದಕ್ಕೂ ಇಂತಿಷ್ಟು ಹಣ ವಸೂಲು ಮಾಡಿಕೊಂಡರು. ಜನರ ಸಮಾಧಾನಕ್ಕೆ ಆಧಾರ್ ಕಾರ್ಡ್, ಗುರುತಿನ ಚೀಟಿ ಮುಂತಾದವನ್ನು ತೋರಿಸಿ ಮಂಕುಬೂದಿ ಎರಚಲಾಗುತ್ತಿತ್ತು.

ಪ್ರವಾದಿಯ ಈ ಅವತಾರದಿಂದ ಹೊಡೆತ ಬಿದ್ದದ್ದು ನಗರದ ಅನೇಕ ಜಗದ್ಗುರುಗಳಿಗೆ. ಮಠದ ಸಿರಿವಂತ ಭಕ್ತರೆಲ್ಲ ಪ್ರವಾದಿ ಕೇಂದ್ರದ ಬಳಿ ಠಿಕಾಣಿ ಹೂಡಿದ್ದರು. ಬಡವರು, ಜುಗ್ಗರು, ನಿಜವಾದ ಭಕ್ತರು ಮಾತ್ರ ಮಠಗಳಿಗೆ ಬರತೊಡಗಿದರು. ಮಠಗಳ ಆರ್ಥಿಕ ಮೂಲಾಧಾರಗಳಾಗಿದ್ದ ಭ್ರಷ್ಟ ಮಂತ್ರಿ ಮಹೋದಯರು, ಸರ್ಕಾರಿ ಹಿರಿಯ ಅಧಿಕಾರಿಗಳು, ಕೈಯಲ್ಲಿ ದುಡ್ಡಾಡುವ ಪ್ರತಿಯೊಬ್ಬರೂ ಪ್ರವಾದಿ ಕೇಂದ್ರದಲ್ಲಿ ಸೇರಿಕೊಂಡಿದ್ದರು. ಅನೇಕ ಧಾರ್ಮಿಕ ಗುರುಗಳು ಪ್ರವಾದಿ ಕೇಂದ್ರಕ್ಕೆ ರಾತ್ರಾನುರಾತ್ರಿ ಯಾರಿಗೂ ಗೊತ್ತಾಗದಂತೆ ಬಂದು ಪ್ರವಾದಿ ಕಾಲಿಗೆರಗಿ ಹಣ ಪೀಕಿ ಆಯಸ್ಸು ಪಡೆದು ಹೋಗುತ್ತಿದ್ದರು. ಎಷ್ಟು ಕದ್ದು ಮುಚ್ಚಿ ಮಾಡಿದರೂ ಅವರ ಕಳ್ಳಾಟ ಬಯಲಾಗುವುದು ತಪ್ಪುತ್ತಿರಲಿಲ್ಲ. ಸಣ್ಣ ಪುಟ್ಟ ಧಾರ್ಮಿಕ ಗುರುಗಳು ದೊಡ್ಡವರ ಕಳ್ಳಾಟವನ್ನು ಬಟಾಬಯಲು ಮಾಡುತ್ತಿದ್ದರು. ಅನೇಕ ಕವಿಗಳು, ವೈಚಾರಿಕ ವೈಜ್ಞಾನಿಕ ಬರಹಗಾರರು, ಭಾಷಣಕಾರರು ಪ್ರವಾದಿ ಕೇಂದ್ರದ ಮೂಲೆ ಮೂಲೆಗಳಲ್ಲಿ ಪ್ರವಾದಿಯಿಂದ ಸಿಗುವ ಭಿಕ್ಷೆಸಿಗಾಗಿ ಝಂಡಾ ಹೊಡೆದು ಕುಳಿತುಬಿಟ್ಟಿದ್ದರು. ಪತ್ರಕರ್ತರು, ದೂರದರ್ಶನ ವಾಹಿನಿಗಳ ಅನೇಕ ಸಂಪಾದಕರು ತಮ್ಮ ಕ್ಯಾಮೆರಾಗಳನ್ನು ಪ್ರವಾದಿ ಕೇಂದ್ರಕ್ಕೆ ವರ್ಗಾಯಿಸಿಕೊಂಡು ಕ್ಷಣಕ್ಕೊಮ್ಮೆ ಬ್ರೇಕಿಂಗ್ ನ್ಯೂಸ್ ಕೊಡುತ್ತ ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಹೆಣಗಾಡುತ್ತಿದ್ದರು. ಅಲ್ಲಿ ಪರಿಸ್ಥಿತಿ ಎಷ್ಟು ಬಿಗಡಾಯಿಸಿತೆಂದರೆ ಪ್ರವಾದಿ ಆಯಸ್ಸು ವರ್ಗಾವಣೆ ಮಾಡುವಾಗ ಚಿನ್ನದ ದಂಡವನ್ನು ಜೋರಾಗಿ